ಅ) ಬ್ರಹ್ಮಲಿಂಗ ಪ್ರೌಢಶಾಲೆ, ಸುಳಗೆ (ಹೆಚ್) ಬೆಳಗಾಂ

ಆ) ಗುರುವರ್ಯ ಶ್ಯಾಮರಾವ್ ದೇಸಾಯಿ ಪ್ರೌಢಶಾಲೆ, ಇದ್ದಲಹೊಂಡ

ಇ) ಶ್ರೀ ಕಾಡಸಿದ್ದೇಶ್ವರ ಪ್ರೌಢಶಾಲೆ, ಗುಂಡೇವಾರಿ, ಅಥಣಿ ತಾಲ್ಲೂಕು

ಈ) ಶಾರದ ಬಾಲಕಿಯರ ಪ್ರೌಢಶಾಲೆ, ಹಲಗ, ಬೆಳಗಾಂ

3. ಮೇಲೆ ತಿಳಿಸಲಾಗಿರುವ ಪ್ರೌಢಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಸರ್ಕಾರಿ ಆದೇಶ ಸಂಖ್ಯೆ : ಇಡಿ 759 ಎಸ್‌ಇಎಸ್ 91 ದಿನಾಂಕ : 12-8-91ರ ಮೇರೆಗೆ ಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಜಿಲ್ಲಾ ಪರಿಷತ್ತುಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಆ) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಂದ ಸದರಿ ಪ್ರೌಢಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿದ್ದು ಅನುದಾನ ಸಂಹಿತೆ ನಿಯಮಗಳನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಕಾವೇರಿ ಟ್ರಿಬ್ಯುನಲ್ ವಿವಾದ.

73 (239) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಟ್ರಿಬ್ಯುನಲ್ ವಿವಾದ ಯಾವ ಹಂತದಲ್ಲಿದೆ ?

ಆ) ಈ ವಿವಾದದ ಬಗ್ಗೆ ಸರ್ಕಾರದವರ ನಿಲುವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ವಿವಾದಕ್ಕೆ ಸಂಬಂಧಪಟ್ಟ ಎಲ್ಲಾ ರಾಜ್ಯಗಳು ತಮ್ಮ ಹೇಳಿಕೆಗಳನ್ನು ಹಾಗೂ ಅದನ್ನು ಬೆಂಬಲಿಸುವ ದಾಖಲೆಗಳನ್ನು ನ್ಯಾಯ ಮಂಡಲಿಗೆ ಸಲ್ಲಿಸಿದೆ. ತಮಿಳುನಾಡು, ಪಾಂಡಿಚೆರಿ ಮತ್ತು ಕೇರಳ ರಾಜ್ಯಗಳು ವಿವಾದದ ಬಗ್ಗೆ ತಮ್ಮ ಮೊದಲ ಹೇಳಿಕೆಯನ್ನು ಮಂಡಿಸಿವೆ. ಕರ್ನಾಟಕವು ದಿನಾಂಕ 20-1-1993ರಂದು ಮೊದಲ ಹೇಳಿಕೆಯನ್ನು ಮಂಡಿಸಬೇಕಾಗಿದೆ.

ಆ) ನ್ಯಾಯ ಮಂಡಲಿಯ ಮುಂದೆ ರಾಜ್ಯದ ವಾದದ ಸಕ್ರಿಯ ಮಂಡನೆ ಮತ್ತು ಮಾತುಕತೆಯಿಂದ ವಿವಾದ ಬಗೆಹರಿಸುವುದರಲ್ಲಿ ತೀವ್ರ ಪ್ರಯತ್ನ.

ಕೃಷ್ಣಾ ಜಲಾನಯನದ ಪ್ರದೇಶದಲ್ಲಿ ಕಾಮಗಾರಿ ಕೆಲಸಗಳಿಗೆ ಮಾಡಲಾದ ವೆಚ್ಚ

76 (243) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೃಷ್ಣಾ ಜಲಾಂತರ ಜಲಾನಯನ ಪ್ರದೇಶದಲ್ಲಿ ಕಾಮಗಾರಿಗಾಗಿ ಮಾರ್ಚ್‌ನಿಂದ ಈವರೆವಿಗೂ ಖರ್ಚು ಮಾಡಿರುವ ಹಣವೆಷ್ಟು;

ಆ) 1992–93ರ ಸಾಲಿಗೆ ಮಂಜೂರು ಮಾಡಿರುವ ಹಣವೆಷ್ಟು ?

ಇ) ಇಲ್ಲಿಂದ ಮುಂಗಡ ಸಾಲಿನವರೆಗೆ ಖರ್ಚು ಮಾಡಲು ಇರುವ ಹಣವೆಷ್ಟು ? (ಕಾಮಗಾರಿ ವಿವರ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಯೋಜನಾವಾರು ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸೂಚಿಸಲಾಗಿದೆ.

ಅನುಬಂಧ

(ಹಣ: ಕೋಟಿ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	1992–93ನೇ ಸಾಲಿನಲ್ಲಿನ ಅನುದಾನ	1992–93ನೇ ಸಾಲಿನಲ್ಲಿ ಅಕ್ಟೋಬರ್ 92ರ ಅಂತ್ಯದ ವರೆಗಿನ ಖರ್ಚಾದ ಹಣ	1992–93ನೇ ಸಾಲಿನಲ್ಲಿ ನವೆಂಬರ್ 92 ರಿಂದ ಮಾರ್ಚ್ 93ರವರೆಗೆ ಖರ್ಚು ಮಾಡ ಬೇಕಾಗಿರುವ ಹಣ
1	2	3	4	5
	ಭಾರಿ ಮತ್ತು ಮಧ್ಯಮ ನೀರಾವರಿ			
1.	ಕೃಷ್ಣಾ ಮೇಲ್ದಂಡೆ –1	155.10	60.05	95.05
2.	ಘಟಪ್ರಭಾ –3	20.00	10.40	9.60
3.	ಮಲಪ್ರಭಾ	20.00	12.33	7.67
4.	ಹಿಪ್ಪರಗಿ	3.00	0.73	2.27
5.	ದೂದಗಂಗಾ	2.00	0.48	1.52
6.	ರಾಮತಾಲ್ ಲಿಫ್ಟ್	0.10	–	0.10
7.	ಮಾರ್ಕಂಡೇಯ	0.50	–	0.50
8.	ಮಹಾದಾಯಿ	1.00	0.12	0.88
9.	ತುಂಗಭದ್ರಾ ಎಡದಂಡೆ ಕಾಲುವೆ	6.00	9,01	–
10.	ತುಂಗಭದ್ರಾ ಬಲದಂಡೆ ಮೇಲ್ಗಾಲುವೆ	3.00	1.93	1.07
11.	ಹಿರೇಹಳ್ಳ	2.00	6.69	–
12.	ಮಸ್ಕಿನಾಲಾ	2.00	0.77	1.23
13.	ಬೆನ್ನಿತೊರ	5.00	3.61	1.39

1 2	3	4	5
14. ಭೀಮಾ ಪ್ಲೋ	0.50	–	0.50
15. ಭೀಮಾ ಲಿಫ್ಟ್	0.30	0.03	0.27
16. ಅಮರ್ಜ	3.00	4.17	–
17. ಮುಲ್ಲಾಮಾರಿ ಮೇಲ್ದಂಡೆ	0.15	0.25	–
18. ಮುಲ್ಲಾಮಾರಿ ಕೆಳದಂಡೆ	2.85	3.43	–
19. ಗಂಹೋರಿನಾರಿ	0.40	0.07	0.33
20. ತುಂಗಾ ಮೇಲ್ದಂಡೆ	2.50	0.28	2.22
21. ಭದ್ರಾ	6.00	10.99	–
22. ಭದ್ರಾ ಅಣೆಕಟ್ಟು ನವೀಕರಣ	1.00	0.81	0.19
23. ರಾಣಿ ಕೆರೆ ಪೂರಕ ನಾಲೆ	0.50	0.54	–
24. ಹೋವಿರಾಯನ ಹಳ್ಳ	0.50	–	0.50
25. ರಾಷ್ಟ್ರೀಯ ಜಲನಿರ್ವಹಣೆ ಯೋಜನೆ	9.00	5.81	3.19
26. ಕೃಷ್ಣಾ ಜಲಾನಯನ ಪಿತ ನೀರಾವರಿ ನಿಗಮ	1.00	0.50	0.50
ಒಟ್ಟು	247.40	133.00	128.98

ಐ.ಎ.ಎಸ್ ಮತ್ತು ಐ.ಪಿ.ಎಸ್. ಅಧಿಕಾರಿಗಳು

77(244) ಶ್ರೀ. ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1989ರ ಈಚೆಗೆ ಕರ್ನಾಟಕ ರಾಜ್ಯ ಸರ್ಕಾರದ ಸೇವೆಯಲ್ಲಿರುವ ಯಾವ ಯಾವ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಯಿತು ?

ಆ) ಯಾವ ಕಾರಣಕ್ಕಾಗಿ ಈ ಕೆಲವು ಅಧಿಕಾರಿಗಳ ಮೇಲೆ ಕೈಗೊಂಡಿದ್ದ ಶಿಸ್ತಿನ ಕ್ರಮವನ್ನು ಕೈಬಿಡಲಾಯಿತು ಮತ್ತು ಯಾವ ಕಾರಣಕ್ಕಾಗಿ ಕೆಲವು ಅಧಿಕಾರಿಗಳನ್ನು ಶಿಕ್ಷಿಸಲಾಯಿತು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಶ್ರೀಯುತರು:

1. ಎಂ. ಶಂಕರನಾರಾಯಣನ್, ಐಎಎಸ್
2. ಕೌಶಿಕ ಮುಖರ್ಜಿ, ಐಎಎಸ್
3. ಆರ್.ಕೆ. ಭಾಟಿಯಾ, ಐಎಎಸ್
4. ಡಿ. ತಂಗರಾಜ್, ಐಎಎಸ್
5. ಎಂ. ಮದನಗೋಪಾಲ್, ಐಎಎಸ್
6. ರಿಚರ್ಡ್ ಕ್ರಾಸ್ಟಾ, ಐಎಎಸ್
7. ಪಿ.ಜಿ. ನಾಯ್ಕ, ಐಎಎಸ್
8. ಬಿ.ಕೆ.ಡಿ. ನೇಗಿ, ಐಎಎಸ್
9. ಕೆ.ಎಸ್.ಎನ್.ಚಿಕ್ಕೆರೂರು, ಐಪಿಎಸ್